ತಾರೀಖು ನೆ ಜೂ 1909.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ–ಈ ಡಿಸ್ಟ್ರಿಕ್ಟಿಗೆ ಕೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿ ಇರುವ (ಸ್ಟೇಟ್ ಫಾರೆಸ್ಟ್ಟು ಮತ್ತು ಪ್ಯಾರ್ಟಿಕ್ಯುಲರ್ಗಳು ವಿನಹ) ಹಿಡುವಳಿಯಲ್ಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡೀ ಮತ್ತು ಕಕ್ಕೆ ಚಕ್ಕೆಯನ್ನು 1909ನೆ ಇಸವಿ ಜುಲೈ ಗುರ್ಯೇ ಲಾಗಾಯಿತು 1911ನೆ ಇಸವಿ ಜೂ 30ನೆ ತಾರೀಖು ವರಿಗೆ ಜಮಾಯಿಸಿ ತೆಗದು ಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಆಯಾಯ ತಾಲ್ಲೂಕು ಅಮಲ್ದಾರ್ರು ಮತ್ತು ಫಾರೆಸ್ಟ್ಟು ಆಫಿಸರುಗಳಿಂದ ಹರಾಜು ಮಾಡಿಸುತ್ತೆ :—

ನಂಬರ್.	ತಾಲ್ಲೂಕು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.	ಹರಾಜು ಮಾಡಿಸುವ ಆಫಿಸರ ಹೆಸರು
1	ತರೀಕೆರೆ ...	26—7—1909	ತಾಲ್ಲೂಕ್ ಕಛೇರಿಯಲ್ಲಿ.	ಅಮಲ್ದಾರ್ರು ಮತ್ತು ಲಕ್ಕವಳ್ಳಿ ರೇಂಜಾಫಿಸರು.
2	ಕಡೂರು ...	28—7—1909	ಡಿಪೋ	ಅಮಲ್ದಾರ್ರು ಮತ್ತು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು.
3	ಚಿಕ್ಕಮಗಳೂರು ...	31—7—1909	ಡಿಟೋ	ಅಮಲ್ದಾರ್ರು ಮತ್ತು ಮೂಡಿಗೆರೆ ರೇಂಜಾಫಿಸರು.

ನೋಟ್—ಹರಾಜು ಅವಶ್ಯಕ ಕಂಡರೆ ಸಂಮತುವಾರಾಗಿ ಮಾಡಿಸಲ್ಪಡುತ್ತೆ.

2. ಆಯಾಯ ತಾರೀಖಿನ ಮಧ್ಯಾಹ್ನದಲ್ಲಿ ಹರಾಜು ಪ್ರಾರಂಭಿಸಲ್ಪಡುತ್ತೆ.

3. ಹರಾಜು ಡೆಪ್ಯೂಟಿ ಕಮಿಷ್ಶನರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

4. ಸವಾಲ್ ಮಾಡಲು ಇಷ್ಟವುಳ್ಳವರು ಖುದ್ದಾಗಿಯಾಗಲೀ ಅಥವಾ ಕ್ರಮಪ್ರಕಾರ ಮೊಖ್ತ್ಯಾರಿ ವಹಿಸಿದ ಏಜಂಟರ ಮುಖಾಂತ್ರವಾಗಲಿ ಹಾಜರಾಗಿ ಸವಾಲ್ ಮಾಡತಕ್ಕದ್ದು.

5. ಹರಾಜು ಕೈದಾದ ಕೂಡಲೆ ಛಡ ಸವಾಲ್ದಾರನು ನಗದಾಗಿ ಹರಾಜು ಮೊಬಲಗು ಮತ್ತು ಇದಕ್ಕೆ ಲೋಕಲ್ ಸೆಸ್ ರೂ ಪಾಯಿ ಬಂದಕ್ಕೆ ಬಂದಾಣಿ ಪೈರಿಗೆ ಕೇರಿಸಿ ಒಟ್ಟು ಹಣದಲ್ಲಿ $\frac{1}{4}$ ಹಿಸ್ಸೆಯನ್ನು ಡಿಪಾಜಿಟ್ ಹಾಜರ್ಮಾಡಬೇಕು. ಆ ಪ್ರಕಾರ ಹಾಜರ್ಮಾಡದೆ ತಪ್ಪಿದರೆ ಈ ಸ್ವತಂತ್ರದ ಹಕ್ಕನ್ನ ಪುನಃ ಹರಾಜು ಮಾಡಲ್ಪಡುತ್ತೆ.

6. ಮೇಲೆ ಹೇಳಿದಂತೆ ದುಸರಾ ಹರಾಜು ಮಾಡಿಸುವದರಲ್ಲಿ ಲುಕ್ಸಾನಿಗೆ ಅವ್ವಲ್ ಹರಾಜುದಾರ ಗುರಿಯಾಗತಕ್ಕದ್ದು. ಆ ದುಸರಾ ಹರಾಜಿನಲ್ಲಿ ಲಾಭ ಬಂದರೆ ಅವನಿಗೇನೂ ಹಕ್ಕು ಇರುವದಿಲ್ಲ. ನಷ್ಟಬಂದರೆ ಮೊದಲು ಹರಾಜಿನಲ್ಲಿ ಬಂದ ಸವಾಲ್ ಮೊಬಲಗಿಗೂ, ಎರಡನೆ ಹರಾಜಿನಲ್ಲಿ ಬಂದ ಹಣಕ್ಕೂ ಕಮ್ಮಿ ಬಿಳುವ ಹಣವನ್ನ ಅವ್ವಲ್ ಹರಾಜುದಾರ್ರಿಂದ ರೆವಿನ್ಯೂ ಬಾಕೀ ಯಂತೆ ವಸೂಲ್ಮಾಡಲ್ಪಡುತ್ತೆ.

7. ಛಡ ಸವಾಲ್ದಾರನು ಬಾಕಿ $\frac{3}{4}$ ಹಿಸ್ಸೆ ಹಣವನ್ನು ಮತ್ತು ಅದರ ಲೋಕಲ್ ಸೆಸ್ ಸಹಿತ ಹರಾಜು ತಾರೀಖು ಲಾಗಾಯಿತು ಬಂದು ತಿಂಗಳವಳಗೆ ಪಾವತೀ ಮಾಡಬೇಕು, ತಪ್ಪಿದರೆ ಮೊದಲು ಇಟ್ಟ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಕೇರಿಸಲ್ಪಡುತ್ತೆ. ಇದಲ್ಲದೆ ಮುಂದೆ ಜಮಾಯಿಸಿಕೊಳ್ಳುವದಕ್ಕೆ ಅವಕಾಶಕೊಡದೆ ಇಜಾರೆ ಹಕ್ಕು ತಪ್ಪಿಸುತ್ತೆ. ಬಾಕೀ ಏನಾದರೂ ಮೊಬಲಗು ನಿಂತರೆ ರೆವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡುತ್ತೆ.

8. ಹರಾಜು ಮಂಜೂರಿಯ ಸಂಗತಿಯನ್ನ ಹರಾಜುದಾರ್ರಿಗೆ ತಿಳಿಸಿದ (3) ಮೂರುದಿವಸಗಳಲ್ಲಿ ಸರಿಯಾದ ಛಾಪಾ ಕಾಗದ್ದಲ್ಲಿ 9ನೆ ಪ್ಯಾರಾದಲ್ಲಿ ಕಂಡ ಷರತ್ತುಗಳ ಮೇರಿಗೆ ನಡದುಕೊಳ್ಳಲು ಬದ್ಧನಾಗಿ ಇರುವಂತೆ ಹರಾಜುದಾರನು ಮುಚ್ಚಳಿಕೆ ಬರದುಕೊಡಬೇಕು.

9. ಈ ಕೆಳಗೆ ನಮೂದಾಗುವ ಷರತ್ತುಗಳ ಮೇರ ಹರಾಜುದಾರ್ರು ನಡದುಕೊಳ್ಳಬೇಕು.

(1) ಬಂದು ವರುಷಕ್ಕೆ ಬಳಪಟ್ಟು ಗಿಡಗಳನ್ನ ಕಡಿಯಕೂಡದು.

(2) ತೊಬಟಿ ತೆಗೆದ ಕಡ್ಡಿಗಳು ಇಜಾರೆದಾರನದಾಗಿ ಇರತಕ್ಕದ್ದು.

(3) ಇಜಾರೆ ಮೇರೆ ಸಾಗಿಸಿಕೊಂಡ ಚಕ್ಕೆ ಮೊತ್ತದ ತಪಶೀಲ್ ಲೆಖ್ಕ ಇಡಬೇಕು. ತಾಲ್ಲೂಕ್ ಅಮಲ್ದಾರ್ರು ಅಥವಾ ಡೆಪ್ಯೂಟಿ ಕಮಿಷ್ಶನರ್ ಸಾಹೇಬರವರಿಂದ ನೇಮಿಸುವ ಇತರ ಆಫಿಸರು ಲೆಖ್ಖ ತನಿಖೇ ಮಾಡಲು ಬಂದಾಗ ಲೆಕ್ಕ ತೋರಿಸಬೇಕು.

(4) ಡೆಪ್ಯೂಟಿ ಕಮಿಷನರ್ ಸಾಹೇಬರವರು ವಿಧಿಸುವ ರೀತಿಯಂತೆ ಚಕ್ಕೆ ಸಾಗಿಸಿಕೊಳ್ಳತಕ್ಕ ಬಗ್ಗೆ ಪ್ಯಾಸ್ ಪಡಿಯ ಬೇಕು.

(5) 1911ನೆ ಇಸವಿ ಜೂ ಆಖೈರು ವಳಗಾಗಿ ಕಡದ ಜಮಾಯಿಸಿಕೊಂಡು ಇರುವ ಚಕ್ಕೆಯನ್ನೆಲ್ಲಾ ಆಯಾಯ ತಾಲ್ಲೂಕಿನ ನರಹದ್ದಿನ ಹೊರಕ್ಕೆ ಸಾಗಿಸಬಿಡಬೇಕು.

(6) ಮೇಲ್ಕಂಡ ಷರತ್ತುಗಳಲ್ಲಿ ಯಾವದಕ್ಕಾಗಲೀ ತಪ್ಪು ನಡದರೆ ಇಜಾರೆ ರದ್ದು ಮಾಡಲ್ಪಡುತ್ತೆ. ಅಲ್ಲದೆ ಸಾಗಿಸದೇ ನಿಂತಿರುವ ಚಕ್ಕೆ ವಿಶಿಷ್ಟವೂ ಸರ್ಕಾರಕ್ಕೆ ಕೇರಿಸಲ್ಪಡುತ್ತೆ.

(7) ತಂಗಡಿ ಗಿಡಗಳನ್ನು ಚಕ್ಕೆಗೋಸ್ಕರ ಹೊರ್ತು ಗೊಬ್ಬರದ ಸೊಪ್ಪಿಗಾಗಿ ಆಗಲಿ, ಸಾವೇ ಬಗ್ಯಾಗಲೀ ಅಥವಾ ಇನ್ಯಾವದಕ್ಕಾಗಲೀ ಕಡಿಯಕೂಡದು.

ಬಿ. ಹಿರಾಸಿಂಗ್,
ಫಾರ್ ಡೆಪ್ಯೂಟಿ ಕಮಿಷನರ್, ಕಡೂರು ಡಿಸ್ಟ್ರಿಕ್ಟು.